ಹಾಸ್ಟಲ್‌ಗಳನ್ನು ಎರಡು ವರ್ಷಗಳ ಕಾಲದವರೆಗೆ ಸರ್ಕಾರದ ನೆರವು ಇಲ್ಲದೆ ನಡೆಸುವುದು ಕಷ್ಟವೆಂದೆ ಇಲ್ಲಿ ಅನೇಕ ಮಾನ್ಯ ಸದಸ್ಯರು ತಿಳಿಸಿದ್ದಾರೆ ಮತ್ತು ಈ ಬಗ್ಗೆ ಸರ್ಕಾರಕ್ಕೆ ಅನೇಕ ಮನವಿಗಳು ಬರುತ್ತಿವೆ ಆದುದರಿಂದ ಈಗಾಗಲೇ ರೂಲ್ಸ್ ಸರ್ಕಾರದಲ್ಲಿ ಅಂಗೀಕಾರ ಮಾಡುವುದಕ್ಕೋಸ್ಕರ ಪರಿಶೀಲನೆಯಲ್ಲಿದೆ. ಅಂಗೀಕಾರ ಮಾಡತಕ್ಕ ಕಾಲದಲ್ಲಿ ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೇನೆ. ಮಾನ್ಯ ಸದಸ್ಯರು ಸಂಬ್ಯೆ ಜಾಸ್ತಿಯಾಗಬೇಕು ಎಂದು ಹೇಳಿದ್ದಾರೆ. ಈಗಿರತಕ್ಕ ಮನವಿಗಳನ್ನು ತರಿಸಿ ಗ್ರಾಂಟ್ ಅಸ್ಟ್ಸ್ ಆಗದ ರೀತಿಯಲ್ಲಿ ಯೋಗ್ಯವಾದಂಥ ರೀತಿಯಲ್ಲಿ ಇತ್ಯರ್ಥ ವಾಗಬೇಕು ಎಂದು ಹೇಳಿದ್ದೇನೆ. ಶಿಕ್ಷಣ ಇಲಾಖೆಯ ಡೈರೆಕ್ಟರನ್ನು, ಸಮಾಜ ಕಲ್ಯಾಣ ಇಲಾಖೆಯ ಡೈರೆಕ್ಟರನ್ನು ಕರೆಸಿ ಯಾವ ಯಾವ ಪ್ರಪೋಸಲ್ಸ್ ಡೈರಕ್ಟರ್ ಲೆವೆಲ್‌ನಲ್ಲಿದೆ ಅವುಗಳನ್ನು ಪರಿಶೀಲನೆ ಮಾಡಿ ೨೫–೨೬–೨೭ರವರೆಗೆ ಇತ್ಯರ್ಥ ಮಾಡಬೇಕು ಎಂದು ಸೂಚನೆ ಕೊಟ್ಟಿದ್ದೇನೆ. ಆದುದರಿಂದ ಮಾನ್ಯ ಸದಸ್ಯರು ಆತಂಕ ಪಡಬೇಕಾಗಿಲ್ಲ. ಮಾನ್ಯ ಸದಸ್ಯರಾದ ಪ್ರಭಾಕರ್‌ರವರು ಏನು ಸಲಹೆಗಳನ್ನು ನನ್ನ ಗಮನಕ್ಕೆ ತಂದಿದ್ದಾರೆ, ಖಂಡಿತವಾಗಿಯೂ ಅದರ ಬಗ್ಗೆ ಕ್ರಮ ತೆಗೆದುಕೊಂಡು ಲೋಪದೋಷ ವಿದ್ದರೆ ಅದನ್ನು ಸರಿಪಡಿಸುವುದಕ್ಕೆ ಕ್ರಮ ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಟಿ. ಚೌಡಯ್ಯ.— ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡುತ್ತೇನೆ ಎಂದು ಹೇಳಿದರು. ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ಗ್ರಾಂಟ್ ಮಂಜೂರು ಮಾಡಿರತಕ್ಕ ಹಾಸ್ಟೆಲುಗಳಿಗೆ ಪ್ರಾರಂಭದಲ್ಲಿ ಒಂದು ಕ್ವಾರ್ಟರ್ಸ್‌ಗೆ, ಅರ್ಧ ವರ್ಷಕ್ಕೆ ಅಡ್ವಾನ್ಸ್ ಕೊಡುವುದಕ್ಕೆ ವ್ಯವಸ್ಥೆ ಮಾಡಿದರೆ ಹಾಸ್ಟೆಲ್ ನಡೆಸಿಕೊಂಡು ಹೋಗುವುದಕ್ಕೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ರೆಗ್ಯುಲರಾಗಿ ಪ್ರತಿ ತಿಂಗಳೂ ಕೊಡುವುದಕ್ಕೆ ಅವಕಾಶ ಮಾಡಿದರೆ ಅನುಕೂಲವಾಗುತ್ತದೆ.

ಅಧ್ಯಕ್ಷರು.— ಅಂತಹ ವ್ಯವಸ್ಥೆ ಮೊದಲು ಬಾಂಬೆ ಕರ್ನಾಟಕದಲ್ಲಿತ್ತು. ಮುಂಜೇನೇ ಕೊಟ್ಟು ಆಡಿಟ್ ವಗೈರೆ ಮಾಡತಕ್ಕಂಥಾದ್ದು ಇತ್ತು.

ಶ್ರೀ ಪಿ. ವೆಂಕಟರಮಣ.— ಮಾನ್ಯ ಸದಸ್ಯರು ಮತ್ತು ತಾವು ಈ ವಿಚಾರದಲ್ಲಿ ಏನು ಸಲಹೆ ಕೊಟ್ಟಿದ್ದೀರಿ, ಪ್ರಸ್ತಾಪ ಮಾಡಿದ್ದೀರಿ ಅದನ್ನು ಖಂಡಿತವಾಗಿ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

(ii) ವಿಷಯ: ಜಯನಗರದ ಕಮಲಾ ನೆಹರು ಮಕ್ಕಳ ಶಾಲೆಯಲ್ಲಿ ಮಹಿಳಾ ಶಿಕ್ಷಕಿಯರ ಮೇಲೆ ನಡೆದಂಥಾ ದೌರ್ಜನ್ಯ ಮತ್ತು ಅಲ್ಲಿರತಕ್ಕ 250 ಶಿಕ್ಷಕರನ್ನು ಹೊರಗಡೆ ಕಳಿಸಿ ಶಾಲೆಯನ್ನು ಮುಚ್ಚುವ ಬಗ್ಗೆ

ಶ್ರೀ ಮುಳ್ಳೂರು ಆನಂದರಾವ್.— ಮಾನ್ಯ ಅಧ್ಯಕ್ಷರೇ, ಜಯನಗರದ ಕಮಲಾ ನೆಹರು ಮಕ್ಕಳ ಶಾಲೆಯಲ್ಲಿ ಮಹಿಳಾ ಶಿಕ್ಷಕಿಯರ ಮೇಲೆ ನಡೆದಂಥ ದೌರ್ಜನ್ಯ ಮತ್ತು ಅಲ್ಲಿರತಕ್ಕ ೨೫೦ ಶಿಕ್ಷಕರನ್ನು ಹೊರಗಡೆ ಕಳಿಸಿ ಶಾಲೆಯನ್ನು ಮುಚ್ಚುವ ಕೆಲಸ ಏನು ನಡೆಯುತ್ತಿದೆ ಅದರ ಬಗ್ಗೆ ಮಾನ್ಯ ಶಿಕ್ಷಣ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.— ಮಾನ್ಯ ಅಧ್ಯಕ್ಷರೇ, ಈ ಒಂದು ಹೇಳಿಕೆಯನ್ನು ಮಾಡುತ್ತೇನೆ

The management of Kamala Nehru makkala Mandira is running a number of educational institutions in Bangalore.

On 17-3-1981, the Deputy Director of Public Instruction, Bangalore City South District received information that there was some disturbance in the School situated at Jayanagar, Bangalore. The DDPI immediately went to the spot and found that all the teachers in the School were standing in the compound without conducting classes. They complained to the DDPI about the mis-behaviour of the Founder-Director. They further stated that the Founder-

Director was frequently announcing that he would close down the Institution after 31st March, 1981. There was however no manhandling of any lady teacher. The Institutions have not been closed down and no teacher has been retrenched so far.

It may be mentioned here that all is not well with the management of Kamala Nehru Makkala Mandira Institutions. Certain irregularities committed in the Teachers Training Institute run by this management have come to Government's notice. Government are of the view that a thorough enquiry into the affairs of the Management of Kamala Nehru Makkala Mandira Institutions is necessary.

After getting the matter enquired into, Government will take appropriate action.

ಶ್ರೀ ಮಳ್ಳೂರು ಆನಂದರಾವ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳ ಹೇಳಿಕೆಯನ್ನು ನಾನು ಸ್ವಾಗತ ಮಾಡುತ್ತೇನೆ. ಇದರಲ್ಲಿ ಎರಡು ಮೂರು ವಿಷಯಗಳನ್ನು ಸ್ಪಷ್ಟ ಆಳವಾಗಿ ಹೋಗಿ ನೋಡ ಬೇಕು ಎಂದು ಹೇಳುತ್ತೇನೆ. ಹೇಳಿಕೆಯಲ್ಲಿ ಮ್ಯಾನ್ ಹ್ಯಾಂಡ್ಲಿಂಗ್ ಇಲ್ಲ ಎಂದು ಹೇಳಿದ್ದೀರಿ. ಉಮನ್ ಹ್ಯಾಂಡ್ಲಿಂಗ್ ಆಗಿದೆ. ಮಹಿಳಾ ಶಿಕ್ಷಕಿಯರೆಲ್ಲರೂ ಇಲ್ಲಿ ಬಂದಿದ್ದರು.

ಅಧ್ಯಕ್ಷರು.—ಐಪಿಸಿ ನಲ್ಲಿ ಮ್ಯಾನ್ ಹ್ಯಾಂಡ್ಲಿಂಗ್ ಇದೆ ಉಮನ್ ಹ್ಯಾಂಡ್ಲಿಂಗ್ ಇಲ್ಲ.

ಶ್ರೀ ಮಳ್ಳೂರು ಆನಂದರಾವ್.—ಅಲ್ಲಿ ಫೌಂಡರ್ ಡೈರಕ್ಟರ್ ಎಂದು ಕರೆಯುತ್ತಾರೆ. ಅವರು ತುಳಸಮ್ಮ ಎನ್ನುವವರಿಗೆ ಜನಿಸಿದ್ದಾರೆ. ಥೂ, ಥೂ, ಎಂದು ೫ ಬಾರಿ ಮಕ್ಕಳ ಮುಂದೆ ಉಗಿದು ಹೊರಗಡೆ ಅಟ್ಟಿದ್ದಾರೆ. Head mistress is a muslim lady. She came here trembling. ಪರೀಕ್ಷೆ ನಡೆಯುತ್ತಿದೆ. ಮಕ್ಕಳಿಗೆ ತೊಂದರೆ ಆಗುತ್ತದೆ ಎಂದು ಅವರು ವಿಧಾನಸೌಧಕ್ಕೆ ಬರಲಿಲ್ಲ. ಶ್ರೀಮತಿ ನಾಗಮ್ಮನವರನ್ನು ಕರೆದುಕೊಂಡು ಹೋಗುತ್ತಿದ್ದೆ. ಡೈರೆಕ್ಟರ್ ಮಕ್ಕಳ ಮುಂದೆ ಮಹಿಳಾ ಶಿಕ್ಷಕಿಯರನ್ನು ಹೊಡೆದಿದ್ದಾರೆ. ಮ್ಯಾನ್ ಹ್ಯಾಂಡ್ಲಿಂಗ್ ಆಗಿದೆ.

ಅಧ್ಯಕ್ಷರು.—ಮ್ಯಾನ್ ಹ್ಯಾಂಡ್ಲಿಂಗ್‌ಗೆ ಅರ್ಥವನ್ನು ಡಿಕ್ಷನರಿ ನೋಡಿ.

ಶ್ರೀ ಮಳ್ಳೂರು ಆನಂದರಾವ್.—ಅವರು ನೋಡಿದರೆ ಒಳ್ಳೆಯದು. ಒಬ್ಬ ಲೇಡಿ ಟೀಚರ್‌ಗೆ ಮುಖದ ಮೇಲೆ ಉಗಿದರೆ ಮ್ಯಾನ್ ಹ್ಯಾಂಡ್ಲಿಂಗ್ ಆಗುತ್ತದೋ ಗೊತ್ತಿಲ್ಲ, ಮೈಮಂಟ್ಟಿ ಹೊಡೆದರೆ ಆಗುತ್ತದೋ ಗೊತ್ತಿಲ್ಲ. ಗಂಡಸರು ಉಗಿದರು. Man spitting on the face of a lady teacher. ಅದರ ಬಗ್ಗೆ ನಾನು ಹೋಗುವುದಿಲ್ಲ. ಹೇಳಿಕೆಯಲ್ಲಿ The Institutions have not been closed down and no teacher has been retrenched so far, ಎಂದು ಹೇಳಿದ್ದೀರಿ. ಲೇಡಿ ಟೀಚರ್ ಜಯಲಕ್ಷ್ಮಿ ಎನ್ನುವವರಿಗೆ ನೋಟೀಸ್ ಕೊಟ್ಟು ಕಳಿಸಿದ್ದಾರೆ. ಅವರು ಬೀದಿ ಪಾಲಾಗಿದ್ದಾರೆ. ಡೆಪ್ಯುಟಿ ಡೈರೆಕ್ಟರ್ ಲಿಖಿತ ಮೂಲಕ ಕಳಿಸಿ ಎಂದು ಹೇಳಿದ್ದಾರೆ. ಎಲ್ಲಾ ಟೀಚರ್ಸ್‌ಗೂ ಇದೇ ರೀತಿ ನೋಟೀಸ್ ಕೊಡುವುದಕ್ಕೆ ತಯಾರಿ ನಡೆದಿದೆ. ಇದು ನಡೆದಿರತಕ್ಕ ಕಥೆ. ಈ ಶಾಲೆಯಲ್ಲಿ ಏನು ಅಕ್ರಮಗಳು ನಡೆದಿವೆ ಅದರ ಬಗ್ಗೆ ಎನ್‌ಕ್ವೈರಿ ಮಾಡುತ್ತೇನೆ ಎಂದು ಮಾನ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಮಾನ್ಯ ಮಂತ್ರಿಗಳಲ್ಲಿ ನಾನು ಸಮ್ಮತಿಯಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ. ಶ್ರೀಮತಿ ನಾಗಮ್ಮನವರು ಶಿಕ್ಷಣ ಇಲಾಖೆಯನ್ನು ಪಳಿಸಿಕೊಂಡಿದ್ದಾರೆ, ಅವರ ಉತ್ಸಾಹಕ್ಕೆ ಅಭಿನಂದಿಸುತ್ತೇನೆ. ಈ ಸ್ಕೂಲಿನಲ್ಲಿ ನಡೆದಿರತಕ್ಕ ಅಕ್ರಮಗಳನ್ನು ಹೊರ ದೂಡಬೇಕು. ನಾನು ಸುಮಾರು ೧೦ ವರ್ಷಗಳಿಂದ ಮೇಲ್ಮನೆಯ ಸದಸ್ಯನಾದಾಗಿನಿಂದಲೂ ಪ್ರಯತ್ನ ಮಾಡುತ್ತಿದ್ದೇನೆ, ನನ್ನ ಕೈಲಿ ಆಗಲಿಲ್ಲ, ಅಲ್ಲಿನ ಮ್ಯಾನೇಜರು, ಡೈರಕ್ಟರು ೫ ಶಿಕ್ಷಣ ಮಂತ್ರಿಗಳನ್ನು ನೋಡಿಬಿಟ್ಟಿದ್ದಾರೆ, ಅವರಿಗೆ ಕರತಲಾಮಲಕವಾಗಿಬಿಟ್ಟಿದೆ. ಸುಮಾರು ೫೦ ಲಕ್ಷ ರೂಪಾಯಿ ಆಸ್ತಿ ಮಾಡಿರಬಹುದು. ತಿಂಗಳ ಪರಮಾನ್ನ ೩೦ ರಿಂದ ೪೦ ಸಾವಿರ ಕೌಂಟರ್ ಕಲೆಕ್ಷನ್. ಒಬ್ಬೊಬ್ಬ ಹುಡುಗನಿಂದ ೮೦ ರೂಪಾಯಿ ಅಧಿಕೃತವಾಗಿ ಕಲೆಕ್ಟ್ ಮಾಡುತ್ತಾರೆ. ಆ ಹಣ ಎಲ್ಲಿಗೆ

ತೆಗೆದುಕೊಂಡು ಹೋಗುತ್ತಾರೊ. ಒಬ್ಬರು ೫೦ ಲಕ್ಷ ರೂಪಾಯಿ ಲೂಟಿ ಹೊಡೆದಿದ್ದಾರೆ. ಈ ರಸಿಟ್‌ಗಳು ಹೀಗಿವೆ.

ಶ್ರೀ ಪಿ. ರಾಮದೇವ್.—ಅಡ್ಮಿನೀಟರನ್ನು ಅಪಾಯಿಸೆಂಟ್ ಮಾಡುವುದಕ್ಕೆ ಒತ್ತಾಯಮಾಡಿ.

ಶ್ರೀ ಮಳ್ಳೂರು ಆನಂದರಾವ್.—ಏನು ಎನ್‌ಕ್ವೈರಿ ಮಾಡುತ್ತೀರಿ. ಲೇಡೀ ಟೀಚರ್ಸ್ ಹೋಗಿ ಬಸವನಗುಡಿ ಪೋಲೀಸ್ ಸ್ಟೇಷನ್‌ನಲ್ಲಿ ಕಂಪ್ಲೈಂಟ್ ಕೊಟ್ಟಿದ್ದಾರೆ. ನಾನು ಕಮಿಷನರಿಗೆ ಕೂಡ ಹೇಳಿದೆ. ದಯವಿಟ್ಟು ಅವರಿಗೆ ರಕ್ಷಣೆ ಕೊಡಿ. ಫೌಂಡರ್ ಡೈರೆಕ್ಟರ್ ಗೂಂಡಾಗಳನ್ನು ಎಂಗೇಜ್ ಮಾಡಿದ್ದಾರೆ. ಆಸಿಡ್ ಬಲ್ಬನ್ನು ಪ್ರತಿಯೊಬ್ಬ ಟೀಚರ್ ಮೇಲೆ ಎಸೆಯುತ್ತೇವೆಂದು ಹೆದರಿಸುತ್ತಿದ್ದಾರೆ. Muslim lady, she is trembling. ಕಾಡುಕರನ್ನು ಎಂಗೇಜ್ ಮಾಡಿದ್ದಾರೆ. ಲಾ ಆಂಡ್ ಆರ್ಡರ್‌ನಿಂದ ಅವರಿಗೆ ಹೇಗೆ ರಕ್ಷಣೆ ಕೊಡುತ್ತೀರಿ. ಎನ್‌ಕ್ವೈರಿ ಯಾವಾಗ ಮಾಡುತ್ತೀರಿ. ಮಾರ್ಚಿ ೩೧ರೊಳಗೆ ಮಾಡಬೇಕು. ಈ ಸ್ಕೂಲನ್ನು ಮಾರಾಟಕ್ಕೆ ಇಟ್ಟಿದ್ದಾರೆ. ಸರ್ಕಾರ ಲಕ್ಷಾಂತರ ರೂಪಾಯಿಗಳ ಗ್ರಾಂಟ್ ಕೊಟ್ಟಿದೆ. ೨೫೦ ಜನ ಟೀಚರ್ಸ್ ಇದ್ದಾರೆ, ೪ ಸಾವಿರ ಹುಡುಗರಿದ್ದಾರೆ ಮುಖ್ಯಸ್ಥರು ಸೊಸೆಗೆ ವಿಲ್ ಬರೆಯುತ್ತಿದ್ದಾರೆ. ಈ ಇನ್‌ಸ್ಟಿಟ್ಯೂಷನ್ ನೀನು ತಗೋ, ಅದು ನೀನು ತಗೋ ಎಂದು ವಿಲ್ ಬರೆಯುತ್ತಿದ್ದಾರೆ ಶಿಕ್ಷಕರು ಬೀದಿಯಲ್ಲಿದ್ದಾರೆ. ಪರೀಕ್ಷೆಗಳು ನಡೆಯುತ್ತಿವೆ. ಟೀಚರ್ಸ್ ಅಸೋಸಿಯೇಷನ್ ಅಧ್ಯಕ್ಷರು ಪರೀಕ್ಷೆ ನಡೆಯಲಿ ಅಲ್ಲಿಯತನಕ ತೊಂದರೆ ಕೊಡಬೇಡಿ ಎಂದು ಹೇಳಿದ್ದಾರೆ. ನಾನು ಎರಡು ಮೂರು ಪ್ರಶ್ನೆಗಳನ್ನು ಕೇಳುತ್ತಿದ್ದೇನೆ. ಮಾನ್ಯ ಮಂತ್ರಿಗಳು ಕೆಲಸದಿಂದ ತೆಗೆದುಹಾಕಿರುವ ಶಿಕ್ಷಕರನ್ನು ತೆಗೆದುಕೊಳ್ಳುತ್ತೀರಾ ? ಅವರು ಸಾವಿರಾರು ರೂಪಾಯಿ ದುಡ್ಡು ತಿಂದೂ, ಹೆಡ್ ಮಿಸ್ಟ್ರೆಸ್‌ಗೆ ನೀವು ತಿಂದಿದ್ದೀರಿ ಎಂದು ನೋಟೀಸ್ ಕೊಟ್ಟಿದ್ದಾರೆ. ನಾನು ಆ ನೋಟೀಸನ್ನು ತರಲಿಲ್ಲ. ಇದನ್ನು ನಿಲ್ಲಿಸಲಿಕ್ಕೆ ಏನು ಮಾಡುತ್ತೀರಿ. ಅವರು ೫ ಜನ ಮಂತ್ರಿಗಳನ್ನು ನೋಡಿದ್ದಾರೆ. ನಾನು ೧೦ ವರ್ಷಗಳಿಂದ ಪ್ರಯತ್ನ ಮಾಡುತ್ತಿದ್ದೇನೆ. ಇದರಲ್ಲಿ ನೀವು ಯಶಸ್ವಿ ಯಾಗಿಬಿಟ್ಟರೆ ನಿಮ್ಮನ್ನು ಹೇಗೆ ಅಭಿನಂದನೆ ಮಾಡಬೇಕೋ ನನಗೆ ಗೊತ್ತಿಲ್ಲ. ತಾವು ಇದನ್ನು ಯಾವಾಗ ಮಾಡುತ್ತೀರಿ, ಯಾರ ಮೂಲಕ ಎನ್‌ಕ್ವೈರಿ ಮಾಡುತ್ತೀರಿ. ಇದು ಮಾರ್ಚಿ ೩೧ರೊಳಗೆ ಆಗಬೇಕು.

೧೦-೩೦ ಎ.ಎಂ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಮೊದಲನೆಯವಾಗಿ ಅವರು ಎತ್ತಿದ ಪ್ರಶ್ನೆ ಮ್ಯಾನ್ ಹ್ಯಾಂಡ್ಲಿಂಗ್ ಬಗ್ಗೆ. ಆದರೆ ಈ ವಿಧಾನಸೌಧದ ಹತ್ತಿರ ಯಾವ ಇನ್ಸಿಡೆಂಟೂ ಕೂಡ ನಡೆದಿಲ್ಲ. ಟೀಚರ್ಸ್‌ಗೂ ಮತ್ತು ಮ್ಯಾನೇಜ್‌ಮೆಂಟ್‌ನವರಿಗೂ ಇಬ್ಬರಿಗೂ ಮಧ್ಯೆ ಬಿಸಿ ಬಿಸಿ ಮಾತುಕತೆ ನಡೆದು ಈ ಪ್ರಕರಣ ನಡೆದಿರುವುದು ಆ ಶಾಲೆಯ ಆವರಣದಲ್ಲಿ...

ಶ್ರೀ ಮಳ್ಳೂರು ಆನಂದರಾವ್.—ಮುಖದ ಮೇಲೆ ಉಗಿಸಿಕೊಂಡು ಹಾಗೆಯೇ ಈ ವಿಧಾನ ಸೌಧದ ಹತ್ತಿರ ಬಂದಿದ್ದರು.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಈ ಪ್ರಕರಣ ಆಗಿರುವುದು ಆ ಸ್ಕೂಲ್ ಪ್ರಿಮಿಸೆಸ್ ನಲ್ಲಿ. ಮ್ಯಾನೇಜ್‌ಮೆಂಟ್ ಮತ್ತು ಟೀಚರ್ಸ್ ಮಧ್ಯೆ ಸಾಕಷ್ಟು ಬಿಸಿ ಬಿಸಿ ಮಾತುಕತೆಗಳು ನಡೆದಿವೆ. ಅವರ ಮೇಲೆ ಇವರು, ಇವರ ಮೇಲೆ ಅವರು ಹೀಗೆ ಇಬ್ಬರೂ ಬಸವನಗುಡಿ ಪೋಲೀಸ್ ಸ್ಟೇಷನ್‌ಗೆ ಹೋಗಿ ಕಂಪ್ಲೈಂಟ್ ಕೊಟಿದ್ದಾರೆ.

ಇನ್ನು ಎರಡನೆಯ ಪ್ರಶ್ನೆಗೆ ಉತ್ತರ ಎಂದರೆ, ಆ ಟೀಚರ್ಸ್‌ನ್ನು ರಿಟ್ರೆಂಚ್ ಮಾಡಬಹುದೆಂಬ ಬಗ್ಗೆ ಈ ಸಂಸ್ಥೆಯ ಬಗ್ಗೆ ಸಾಕಷ್ಟು ದೂರುಗಳು ಸರ್ಕಾರಕ್ಕೆ ಬಂದಿವೆ. ಆದರಲ್ಲೂ ಅವರು ನಡೆಸುತ್ತಿರತಕ್ಕ ಟಿಸಿಹೆಚ್ ಇನ್‌ಸ್ಟಿಟ್ಯೂಟ್ ಏನಿದೆ ಇದರಲ್ಲಿ ೧೦೦-೧೫೦ ಜನರನ್ನು ಸೇರಿಸಿಕೊಳ್ಳಬಹುದೆಂದು ನಾವು ಅಪ್ಪಣೆ ಕೊಟ್ಟರೆ ಅವರು ೪೫೦-೫೦೦ ಜನರವರೆಗೂ ಸೇರಿಸಿಕೊಳ್ಳುತ್ತಿದ್ದಾರೆ...

ಶ್ರೀ ಮಳ್ಳೂರು ಆನಂದರಾವ್.—ಇದರಲ್ಲೆಲ್ಲಾ ಅವರಿಗೆ ಸಿಕ್ಕಿರುವುದು ಅಂದರೆ ಸುಮಾರು ೧೦ ಲಕ್ಷ ಇರಬಹುದು ಅಷ್ಟೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಇದರ ಬಗ್ಗೆ ಕೂಲಂಕಷವಾಗಿ ಎನ್‌ಕ್ವೈರಿ ಮಾಡಿಸುತ್ತೇವೆ. ಈ ಎನ್‌ಕ್ವೈರಿ ಕಮಿಟಿಗೆ ಒಬ್ಬ ಸೀನಿಯರ್ ಆಫೀಸರನ್ನು ನೇಮಕ ಮಾಡುತ್ತೇವೆ. ಇದನ್ನು ಈ ಸಂಸ್ಥೆಯ ಮುಂದಿನ ಅಕಾಡೆಮಿಕ್ ಇಯರ್ ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ಮಾಡಿಸುತ್ತೇವೆ. ಅಲ್ಲದೆ ಅಲ್ಲಿನ ಟೀಚರ್ಸ್‌ನ್ನೂ ಕೂಡ ರಿಟ್ರೆಂಚ್ ಮಾಡದಿರುವಂತೆ ನೋಡಿಕೊಳ್ಳುತ್ತೇವೆ. ಅಲ್ಲಿನ ಮಕ್ಕಳಿಗೂ ಕೂಡ ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆ. ಇದರ ಜೊತೆಗೆ ಆ ಇನ್‌ಸ್ಟಿಟ್ಯೂಟ್‌ನ ಪ್ರಾಪರ್ಟಿಯನ್ನು ಮ್ಯಾನೇಜ್‌ಮೆಂಟ್‌ನವರು ಬೇರೆ ಕಡೆಗೆ ಸಾಗಿಸಲು ಅವಕಾಶ ಕೊಡದಂತೆ ಸೂಕ್ತ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಮಳ್ಳೂರು ಆನಂದರಾವ್.—ಮಾನ್ಯ ಸುಬ್ಬಯ್ಯ ಶೆಟ್ಟಿಯವರು ಹಿಂದೆ ವಿದ್ಯಾ ಮಂತ್ರಿಗಳಾಗಿದ್ದಾಗ ಈ ಇನ್‌ಸ್ಟಿಟ್ಯೂಟ್‌ನ ಒಂದು ಪ್ರಕರಣ ಪಿಜಿಲೆನ್ಸ್ ಕಮಿಷನ್‌ಗೆ ಹೋಯಿತು. ಆದರೆ ಆ ಪ್ರಕರಣ ತನಿಖೆಯಾಗದೆ ಇನ್ನೂ ಅಲ್ಲೇ ಕೊಳೆಯುತ್ತಿದೆ. ಇದು ಅಷ್ಟಕ್ಕೇ ನಿಲ್ಲದೇ ಅವ್ಯವಹಾರಗಳು ಇನ್ನೂ ಅವ್ಯವಹಾರವಾಗಿಯೇ ನಡೆದುಕೊಂಡು ಬರುತ್ತಿದೆ. ಈಗ ಒಬ್ಬ ಸೀನಿಯರ್ ಆಫೀಸರನ್ನು ನೇಮಕಮಾಡಿ ಈ ಪ್ರಕರಣವನ್ನು ಎನ್‌ಕ್ವೈರಿ ಮಾಡಿಸುತ್ತೇನೆಂದು ತಾವು ಹೇಳುತ್ತಿದ್ದೀರಿ,ಆದರೆ ಖಂಡಿತವಾಗಿಯೂ ಇದು ನಿಮ್ಮಿಂದ ಸಾಧ್ಯವಿಲ್ಲವೆಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ನಾನು ಆ ಕಡೆ ಕೂತಿದ್ದು ಈ ಅವ್ಯವಹಾರ ಅಕ್ರಮಗಳನ್ನು ನಿಲ್ಲಿಸಬೇಕೆಂದು ಕೂಗಾಡಿದೆ, ಆದರೆ ಆಗಲಿಲ್ಲ. ಈಗ ಈ ಕಡೆಗೆ ಬಂದು ಕೂತಿದ್ದೇನೆ,

ಶ್ರೀ ಪಿ. ರಾಮದೇವ್.—ಈಗ ಆ ಕಡೆ ಸೇರಿಕೊಂಡಿದ್ದೀರಿ. ಈಗ ಅಕ್ರಮ ಕಡಿಮೆಯಾಗ ಬಹುದೆಂದು ಕಾಣುತ್ತದೆ.

ಶ್ರೀ ಮಳ್ಳೂರು ಆನಂದರಾವ್.—ಆಲ್ಲಿ ಕೂತು ಪ್ರಯತ್ನ ಮಾಡಿ, ಮಾಡಿ ಸಾಕಾಯಿತು ಆಗಲಿಲ್ಲ ಆದಕ್ಕೋಸ್ಕರ ಈಗ ಈ ಕಡೆ ಬಂದು ಕೂತಿದ್ದೇನೆ. ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ನಾನು ಮಾನ್ಯ ಮಂತ್ರಿಯವರಲ್ಲಿ ಮನವಿ ಮಾಡಿಕೊಳ್ಳುವುದಾದರೂ ಇಷ್ಟೆ. ನೀವು ಡಿಪಾರ್ಟ್‌ಮೆಂಟಿಲ್ ಎನ್‌ಕ್ವೈರಿಯನ್ನು ಯಾವ ರೀತಿಯಲ್ಲಿ ಮಾಡಬೇಕೋ ಮಾಡಿ, ಆದರೆ ಈ ಕೂಡಲೇ ಸಿಬಿಐ ನವರಿಗೆ ಈ ಪ್ರಕರಣವನ್ನು ರೆಫರ್ ಮಾಡಿ ಆ ಇನ್‌ಸ್ಟಿಟ್ಯೂಟಿಗೆ ಸಂಬಂಧಪಟ್ಟ ಎಲ್ಲ ಕಾಗದ ಪತ್ರಗಳನ್ನೂ, ಪುಸ್ತಕಗಳನ್ನೂ, ಹಾಗೂ ಇತರೆ ಡಾಕ್ಯುಮೆಂಟ್ಸ್‌ನ್ನೂ ಕೂಡಲೇ ಸೀಸ್ ಮಾಡಿಸಿದರೆ ಮಾತ್ರ ಈ ಪ್ರಕರಣವನ್ನು ತನಿಖೆ ಮಾಡಿಸಲು ಅನುಕೂಲವಾಗುತ್ತದೆ. ಇಲ್ಲದಿದ್ದರೆ ನಿಮ್ಮ ಕೈಯಿಂದಾಗುವುದಿಲ್ಲ. ಏಕೆಂದರೆ, ಈ ಸಂಸ್ಥೆಯ ಸಂಸ್ಥಾಪಕರು ಈ ಜನ ವಿದ್ಯಾ ಮಂತ್ರಿಗಳನ್ನು ನೋಡಿ ಮುಗಿಸಿದ್ದಾರೆ. ಈಗ ನೀವು ಬಂದಿದ್ದೀರಿ. ಇಪತ್ತು ಆ ಡಾಕ್ಯುಮೆಂಟ್ಸ್ ಎಲ್ಲಾ ಶೇಷಗಿರಿರಾಯರ ಮನೆಯಲ್ಲಿ ಇವೆ. ನೀವು ನಿಧಾನ ಮಾಡಿದರೆ ನಿಮಗೆ ಯಾವ ಡಾಕ್ಯುಮೆಂಟ್ಸ್ ಕೂಡ ಸಿಕ್ಕುವುದಿಲ್ಲ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ತಾವು ಸರ್ಕಾರದ ಗಮನಕ್ಕೆ ಯಾವ ಯಾವ ವಿಚಾರ ಗಳನ್ನು ತಂದಿದ್ದೀರಿ ಅವುಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಯಾವ ಪ್ರಭಾವಕ್ಕೂ ಮಣಿಯದೇ ಈ ಪ್ರಕರಣವನ್ನು ಎನ್‌ಕ್ವೈರಿ ಮಾಡಿಸುತ್ತೇವೆಂದು ಭರವಸೆ ಕೊಡುತ್ತೇನೆ.

ಶ್ರೀ ಮಳ್ಳೂರು ಆನಂದರಾವ್.—ಈಗಲೇ ಡಾಕ್ಯುಮೆಂಟ್ಸ್ ಸೀಸ್ ಮಾಡಿಸಿ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಸ್ವಾಮಿ, ಚನ್ನಮ್ಮ ಕೆರೆಯಲ್ಲಿ ಸ್ನಂಗಳು ಹೊಸದಾಗಿ ಬೆಳೆಯುತ್ತಿರುವ ಬಗ್ಗೆ ಒಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೆ. ಆದರೆ ಇದುವರೆವಿಗೂ ಅದು ಬರಲಿಲ್ಲ.

MR. SPEAKER.—I shall see that on Monday. I think they have put your notice on Monday.